**ಪಾಟೀ ಸವಾಲು – ಆರೋಪಿಯ ಪರವಾಗಿ ಶ್ರೀ ಎಸ್.ಎ.ಆರ್. ವಕೀಲರಿಂದ –**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾವು ಮೂಲತಃ ತಮಿಳುನಾಡಿನವರಾಗಿದ್ದು, ಹಿರಿಯೂರಿನಲ್ಲಿ ಹುಟ್ಟಿ ಬೆಳೆದವರಾಗಿದ್ದೇವೆ. ಚಾಸಾ:9, 10 ತಮಿಳುನಾಡಿನವರಾಗಿದ್ದು, ಹಿರಿಯೂರಿನಲ್ಲಿ ಸೆಟ್ಲ ಆಗಿರುತ್ತಾರೆ ಎಂದರೆ ಸರಿ. ಚಾಸಾ:9, 10 ರವರಿಗೆ ಕನ್ನಡ ಓದಲು ಬರೆಯಲು ಬರುತ್ತದೆ. ಮೂರು ವರ್ಷಗಳಿಂದ ಜೆ.ಸಿ.ಬಿ. ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ಎಲ್ಲಿ ಕೆಲಸ ಸಿಗುತ್ತದೆಯೋ ಅಲ್ಲಿ ಕೆಲಸ ಮಾಡುತ್ತೇನೆ ಎಂದರೆ ಸರಿ.

ಚಾಸಾ:2 ರವರು ಹಾಲಿ ಗ್ರಾ.ಪಂ. ಸದಸ್ಯರು ಎಂದರೆ ಸರಿ. ಚಾಸಾ:2 ರವರ ಜಮೀನಿನ ಸರ್ವೇ ನಂಬರು, ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ. ಜೆ.ಸಿ.ಬಿ.ಯ ಮಾಲೀಕರು ಚಾಸಾ:10 ಇರುತ್ತಾರೆ. ನನಗೆ ಪ್ರತಿ ತಿಂಗಳು ಸಂಬಳ ರೂ. 20,000/–, ಭತ್ತೆ 500 ರೂ. ನೀಡುತ್ತಾರೆ. ಜೆ.ಸಿ.ಬಿ. ಚಲಾಯಿಸಲು ನನಗೆ ಲೈಸನ್ಸ್ ಇರುತ್ತದೆ. ಚಾಸಾ:2 ರವರ ಜಮೀನಿನ ಸುತ್ತಮುತ್ತಲು ಬೇರೆ ಜಮೀನುಗಳು ಇರುತ್ತವೆ ಎಂದರೆ ಸರಿ. ಕಿರಣ್ ಇವರ ಜಮೀನಿನ ಸುತ್ತಲು ತಂತಿ ಬೇಲಿ ಇದ್ದು, ಗೇಟ್ ಇರುತ್ತದೆ ಎಂದರೆ ಸರಿ. ಚಾಸಾ:2 ರವರ ಜಮೀನಿನ ಒಳಗೆ ದನ ಕರುಗಳು ಹೋದ ನಂತರ ಬೀಗ ಹಾಕುತ್ತಾರೆ ಎಂದರೆ ಸರಿಯಲ್ಲ. ಚಾಸಾ:2 ನಾಯಿಗಳನ್ನು ಸಾಕಿರುತ್ತಾರೆ ಎಂದರೆ ಸರಿ. ಚಾಸಾ:2 ರವರ ಜಮೀನು ರಸ್ತೆಗೆ ಹೊಂದಿಕೊಂಡು ಸ್ವಲ್ಪ ದೂರದಲ್ಲಿದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಸುಮಾರು ಜನರು ಓಡಾಡುತ್ತಿರುತ್ತಾರೆ ಎಂದರೆ ಸರಿ. ನನ್ನ ಹತ್ತಿರ ಆಕಳು ಬಂದಿತ್ತು ಎಂದು ಹೇಳಿದ್ದು, ಅದು ಜರ್ಸಿ ಆಕಳು ಎಂದರೆ ಸರಿ. ಸದರಿ ಆಕಳು ನನಗೆ ಚೆನ್ನಾಗಿ ಹೊಂದಿಕೊಂಡಿತ್ತು ಎಂದರೆ ಸರಿ. ಯಾರಾದರೂ ಅಪರಿಚಿತರು ಅದರ ಹತ್ತಿರ ಹೋದರೆ ಅದು ಓಡಿ ಹೋಗುವ ಸ್ವಭಾವ ಹೊಂದಿರುತ್ತದೆ ಎಂದರೆ ಸರಿ.

ದೂರನ್ನು ಪೋಲಿಸರು ಬರೆದು, ನನ್ನ ಸಹಿ ಪಡೆದಿರುತ್ತಾರೆ. ದೂರನ್ನು ಪೋಲಿಸರು ನನಗೆ ಓದಿ ಹೇಳಿರುತ್ತಾರೆ. ಚಾಸಾ:9 ಇವರು ಬಿದ್ದ ಸ್ಥಳದಿಂದ ಜೆಸಿಬಿ ಸುಮಾರು ಒಂದು ಫರ್ಲಾಂಗು ದೂರ ಇತ್ತು.

ಚಾಸಾ:9 ರವರಿಗೆ ಯಾರು ಏನು ಮಾಡಿದರು ಎಂದು ನಾನು ನೋಡಿಲ್ಲ ಎಂದರೆ ಸರಿ. ಆರೋಪಿಯನ್ನು ನಾನು ಈ ಮೊದಲು ನೋಡಿಲ್ಲ ಎಂದರೆ ಸರಿ. ಚಾಸಾ:9 ರವರು ಯಾವ ಯಾವ ಆಭರಣಗಳನ್ನು ಹಾಕಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಚಾಸಾ:9 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ನನ್ನ ಜೊತೆಗೆ ಚಾಸಾ:11, 14, 15 ಇದ್ದರು. ನಮ್ಮೂರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇದ್ದು, ನಂತರ ಆದಿವಾಲಾದಲ್ಲಿಯೂ ಸಹ ಪ್ರಾಥಮಿಕ ಆರೋಗ್ಯ ಕೇಂದ್ರ ಇರುತ್ತದೆ ಎಂದರೆ ಸರಿ. ನಮ್ಮೂರಿನ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಆದಿವಾಲಾದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಾಸಾ:9 ರವರನ್ನು ಚಿಕಿತ್ಸೆಗೆ ಕರೆದುಕೊಂಡು ಹೋಗಲಿಲ್ಲ. ನಾನು ಮತ್ತು ಚಾಸಾ:11, 14, 15 ಅಂಬ್ಯುಲನ್ಸ್‌ಗೆ ಫೋನ್ ಮಾಡಿ ಕರೆಯಿಸಿರುವುದಿಲ್ಲ. ಪೋಲಿಸರು ನನಗೆ ಮಹಜರಿಗೆ ಹೇಳಿದ್ದು, ಆದರೆ ಮಹಜರಿಗೆ ಯಾರು ಬರುತ್ತಾರೆ ಮತ್ತು ಯಾವ ವಿಷಯಕ್ಕೆ ಮಹಜರ ಮಾಡುತ್ತಿದ್ದೇವೆ ಎಂದು ನನಗೆ ಹೇಳಲಿಲ್ಲ. ಚಾಸಾ:2 ಗ್ರಾ.ಪಂ. ಸದಸ್ಯರಾಗಿದ್ದು, ಚಾಸಾ:3 ರವರು ರಾಜಕೀಯದಲ್ಲಿದ್ದು, ಅವರು ಪದೇ ಪದೇ ಠಾಣೆಗೆ ಹೋಗುತ್ತಾರೆ ಎಂದರೆ ಸರಿ. ನಾನು ಪೋಲಿಸ್ ಠಾಣೆಗೆ ಹೋದಾಗ ಪೋಲಿಸರು ನನ್ನ 3-4 ಸಹಿ ಪಡೆದಿದ್ದರು ಎಂದರೆ ಸರಿ. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿಲ್ಲ ಎಂದರೆ ಸರಿ. ಪೋಲಿಸ್ ಠಾಣೆಯಲ್ಲಿ ಪೋಲಿಸರು ನನ್ನ ಸಹಿ ಪಡೆದಿದ್ದು, ನಂತರ ಬೇರೆ ಯಾವತ್ತೂ ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿ. ಪೋಲಿಸರು ಹೇಳಿದ್ದರಿಂದ ನಾನು ವಿಡಿಯೋದಲ್ಲಿ ನಿಂತಿದ್ದೇನೆ ಎಂದರೆ ಸರಿ. ಈ ಕೇಸಿನಲ್ಲಿ ನನಗೆ ಏನೂ ಮಾಹಿತಿ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.